

ಶಂಖಾಕಾರದ ಜುಮ್ಮನ ಮುಳ್ಳುಗಳು

ಕುರಿತು ಬರೆಯುತ್ತಾ ಹೋದರೆ ನೂರು ಪುಟಗಳ ಪುಸ್ತಕ ಆಗಬಹುದು.

ಕಶೇರುಕ ಜೀವಿಗಳಲ್ಲಿರುವ ಬೆನ್ನುಹುರಿಗಳಲ್ಲಿ ಸ್ಪೈನಸ್ ಪ್ರೊಸೆಸ್ ಎಂಬ ಭಾಗವಿದೆ. ಮನುಷ್ಯನ ಬೆನ್ನುಹುರಿಗಳಲ್ಲಿ ಸರ್ವಿಕಲ್ ಸ್ಪೈನ್ (ಕುತ್ತಿಗೆ ಭಾಗ), ತೊರಾಸಿಕ್ ಸ್ಪೈನ್ (ಎದೆಗೂಡಿನ ಭಾಗ) ಹಾಗೂ ಲುಂಬಾರ್ ಸ್ಪೈನ್ (ಸೊಂಟದ ಭಾಗ) ಗಳೆಂದು ಇಡೀ ಬೆನ್ನುಹುರಿಯ ಮುಳ್ಳಿನಂತಹ ರೂಪವಿರುವ ಮೂಳೆಗಳ ಭಾಗಗಳನ್ನು ವೈದ್ಯಕೀಯ ವಿಜ್ಞಾನದಲ್ಲಿ ವಿಂಗಡಿಸಲಾಗಿದೆ. ಸಸ್ಯಗಳಲ್ಲೂ ಅದೇ ಸ್ಪೈನ್ಸ್ ರೂಪವಿರುವ ಮುಳ್ಳುಗಳನ್ನು ಸ್ಪೈನ್ಸ್ ಎಂದು, ಗುಲಾಬಿ ಗಿಡದ ಮುಳ್ಳಿನ ವಿಧಕ್ಕೆ ಪ್ರಿಕಲ್ಸ್ ಎಂದು, ಕವಳಿ ಗಿಡದ ಮುಳ್ಳಿನ ತರಹ ರೂಪ ಹೊಂದಿರುವ ಮುಳ್ಳುಗಳಿಗೆ ತಾರನ್ಸ್ ಎಂದು ಮುಳ್ಳುಗಳ ವರ್ಗೀಕರಣದ ಪಾಠವನ್ನು ಸಸ್ಯಶಾಸ್ತ್ರ ಹೇಳಿದೆ.

ಪರಭಕ್ಷಕರಿಗೆ ಸುಲಭದ ತುತ್ತಾಗಬಾರದೆಂದು ಎಷ್ಟೋ ವರ್ಷಗಳ ಕಾಲ ಆ ಸಸ್ಯಗಳ ಪೂರ್ವಜರ ತ್ಯಾಗದ ಫಲವಾಗಿ ವಿಕಾಸ ಹೊಂದಿದ ಮುಳ್ಳುಗಳ ಹುಟ್ಟಿನ ಗುಟ್ಟು ಪ್ರಕೃತಿಯ ವಿಕಾಸವಾದ ಮತ್ತು ಜೀವಿಗಳ ಅಸ್ತಿತ್ವದ ಹೋರಾಟಗಳೇ ಅಲ್ಲವೇ? ಎಲೆಗಳಿಂದ ಸುಲಭವಾಗಿ ಆವಿಯಾಗಿ ಹೋಗುವ ನೀರಿನ ಪಸೆಗಳನ್ನು ಕಾಯ್ದಿರಿಸಿಕೊಳ್ಳಲು ಎಲೆಗಳನ್ನೇ ಮುಳ್ಳುಗಳಾಗಿ ಪರಿವರ್ತಿಸಿಕೊಂಡ ಶುಷ್ಕ ಸಸ್ಯಗಳ ರೂಪಾಂತರದ ವಿಜ್ಞಾನವನ್ನು, ಪ್ರಾಥಮಿಕ ತರಗತಿಗಳಲ್ಲಿ ಬಯಾಲಜಿ ಟೀಚರ್ ಮಾಡಿದ ಪಾಠವು ಮುಳ್ಳಿನಂತೆ ನಾಟಿ, ಇಂದಿಗೂ ಗುರುತು ಉಳಿಸಿಕೊಂಡಿದೆ. ವಿಜ್ಞಾನದ ಪಾಠದ ಹೊರತಾಗಿಯೂ ಮುಳ್ಳುಗಳು ಸದಾ ಚುಚ್ಚುವ ಬಾಲ್ಯದ ನೆನಪು ಕೂಡ ಹೌದು.

ಯಾವುದೇ ಜಾಗವನ್ನು ಹಾಗೆಯೇ ನಿಸರ್ಗದ ಪಾಲಿಗೆ ಬಿಟ್ಟಾಗ, ಕಳೆ ಸಸ್ಯಗಳು ಮತ್ತು ಮುಳ್ಳು ಪೊದೆಗಳು ಪ್ರಕೃತಿಯ ಮೊದಲೆರೆಡು ಆಯ್ಕೆಗಳೆಂದು ಪ್ರಾಯೋಗಿಕವಾಗಿ ಮನಗಾಣಬಹುದು. ಅವುಗಳ ನಡುವೆ ಮರ ಜಾತಿಯ ಸಸಿಗಳು ಮೊಳಕೆಯೊಡೆದು ನಿರಾತಂಕವಾಗಿ ಬೆಳೆದು ಅಂತಿಮವಾಗಿ ಆ ಸ್ಥಳಕ್ಕನುಗುಣವಾದ ಕಾಡಿನ ವಿಧವು ಹರಡಿಕೊಳ್ಳುತ್ತವೆ ಎಂಬಲ್ಲಿಗೆ, ಕಾಡು ಬೆಳೆಯುವ ಪ್ರಕ್ರಿಯೆಗೆ ಮುಳ್ಳು ಪೊದೆಗಳ ಕೊಡುಗೆಯು ಪ್ರಶಂಸನೀಯ. ಸಸ್ಯಾಹಾರಿಯ ಭಕ್ಷಕತನದಿಂದ ಮರ ಜಾತಿಯ ಸ್ಥಳೀಯ ಪ್ರಭೇದಗಳನ್ನು ರಕ್ಷಿಸಿ, ಬೆಳೆಸಲು ನಿಸರ್ಗವೇ ನೇಮಿಸಿದ ಮಿಲಿಟರಿ ಫೋರ್ಸ್‌ಗಳಂತೆ ಮುಳ್ಳು ಸಸ್ಯಗಳು ಚುಚ್ಚೀ ಚುಚ್ಚೀ ಇಕಾಲಜಿಯ ಪ್ರಮುಖ ವಿಷಯಗಳಲ್ಲೊಂದಾದ 'ಸಕ್ಸೆಷನ್' ಬಗ್ಗೆ ಸದ್ದಿಲ್ಲದೇ ತಿಳಿ ಹೇಳುವ ಕ್ರಿಯೆ ಅದ್ಭುತ.

ಒಂದೊಂದು ವಿಧದ ಮುಳ್ಳುಗಳ ಚುಚ್ಚುವಿಕೆಯೂ ಬೇರೆ ಬೇರೆಯದೇ ಪರಿಣಾಮ ಬೀರಬಲ್ಲದು. ಕೆಲವು ಜಾತಿಯ ಮುಳ್ಳುಗಳು ನಂಜುಂಟು ಮಾಡುವವು. ಕೆಲವು ಬರೀ ನೋವು ತರಿಸುವವು. ಇನ್ನು ಕೆಲವು ತುರಿಕೆ ಗುಣದವು. ಮತ್ತೆ ಕೆಲವು, ಏನೂ ಮಾಡಲಾಗದ ಅಸಹಾಯಕ ಮುಳ್ಳುಗಳು. ಹೀಗೆ ಚುಚ್ಚುವ ಮುಳ್ಳುಗಳ ವೈವಿಧ್ಯಗಳಲ್ಲಿ ನೂರೆಂಟು ತರಹದ ಸೂಜಿ ಚಿಕಿತ್ಸೆಗಳಿರುತ್ತವೆ.

ವಿಧವಿಧವಾದ ಮುಳ್ಳುಗಳು ಚುಚ್ಚಿದಾಗ ಆಗುವ ಬೇರೆ ಬೇರೆ ಬಗೆಯ ಅನುಭವಗಳಿಗೆ, ತಮ್ಮದೇ ಆದ ಜೈವಿಕ ಕ್ರಿಯೆಗನುಗುಣವಾಗಿ ಸಸ್ಯಗಳ ಮುಳ್ಳುಗಳನ್ನು ಆಶ್ರಯಿಸಿ ಬದುಕುವ ಸೂಕ್ಷ್ಮಾಣು ಜೀವಿಗಳ ಕೊಡುಗೆಯೂ ಇರಬಹುದು. ಇದಲ್ಲದೇ, ಚುಚ್ಚಿಸಿಕೊಳ್ಳುವ ದೇಹದ ಭಾಗ ಮತ್ತದರ ಮೇಲ್ಮೈ ಗುಣ, ಮುಳ್ಳು ಚುಚ್ಚುವಾಗಿನ ಕೋನ ಹಾಗೂ ಆ ಮುಳ್ಳುಗಳೊಳಗಿರಬಹುದಾದಂಥ ತರಹೇವಾರಿ ಅಲ್ಕೊಲಾಯ್ಡ್, ಕಾರ್ಬೋಹೈಡ್ರೇಟ್, ಗ್ಲೈಕೊಸೈಡ್ ಮುಂತಾದ ಸಸ್ಯಜನ್ಯ ಪದಾರ್ಥಗಳು, ಚುಚ್ಚಿದ ಮೇಲಾಗುವ ಪರಿಣಾಮಗಳನ್ನು ನಿರ್ಧರಿಸುವಂಥವುಗಳು. ಕಾರಣ ಏನೇ ಇರಲಿ, ನೋವಿನ ಮೂಲಕವೂ ಆರೋಗ್ಯ ನೀಡುವ ಪ್ರಕೃತಿಯ ತಾಯ್ತನವ ಕಾಪಾಡುವ ಹೆಗಲ ಮೇಲಿನ ಹೊಣೆ ತಲೆಯಲ್ಲಿಯೇ ಉಳಿಯಬಾರದು.

ಖರ್ಚಿಲ್ಲದ ಸೇವೆಗಳ ನೀಡುವ ಪರಿಸರವನ್ನು ಬಾಯಿತುಂಬ ಹೊಗಳಿ ಅದರಿಂದ ದೂರ ಉಳಿಯುವ ನಾವು ಐಷಾರಾಮಿ ಆಸ್ಪತ್ರೆಗಳನ್ನು ತೆಗಳಿ, ಹಣ ಸುರಿದು ಹತ್ತಿರ ಹೋಗುತ್ತೇವೆ. ಹಾಂ, ಇವು ಚುಚ್ಚು ಮಾತುಗಳಲ್ಲ... ಚುಚ್ಚಲೇಬೇಕಾದ ಮುಳ್ಳಿನ ಬಗೆಬಗೆಯ ಮಾತುಗಳು! ನಾಟಲೇಬೇಕಾದ ನಿಸರ್ಗದ ಸೂಜಿ ಚಿಕಿತ್ಸೆಯ ಅನುಭವಗಳು! ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೆನ್ನುವ ಗಾದೆಯೂ ನಮ್ಮ ಅವಸ್ಥೆ ನೋಡಿ ನಗಲಾರದೆ ಉಳಿಯಬಹುದೇ? ಕಡೆಯಲ್ಲಿ, ಇದೊಂದು ಚಿಂತನೆಯ ಮುಳ್ಳನ್ನು ಸಿಕ್ಕಿಸಿರುವೆ. ನಿಮಗೂ ಚುಚ್ಚಬಹುದು.

ಪ್ರತಿಕ್ರಿಯಿಸಿ: **feedback@sudha.co.in**

